ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ಖಾಸಗೀ ವಾಹನಗಳು ಸಂಚಾರ ಮಾಡುತ್ತಿವೆ?

2) ಅವುಗಳಲ್ಲಿ ಹೆಚ್ಚಿನ ಭಾಗ ಹಳ್ಳಿಗಳ ರಸ್ತೆಗಳಲ್ಲಿ ಸಂಚರಿಸಲು ಪರವಾನಿಗೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

3) ಆದರೆ ಆ ಖಾಸಗಿ ವಾಹನಗಳು ಪರವಾನಿಗೆ ಪಡೆದಿರುವ ಮಾರ್ಗಗಳಲ್ಲಿ ಓಡಿಸದೇ ತಮ್ಮಲ್ಲಿ ಆದ ರೀತಿಯಲ್ಲಿ ಮುಖ್ಯ ರಸ್ತೆಗಳಲ್ಲಿ ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

4) ಗ್ರಾಮಾಂತರ ಪ್ರದೇಶದ ರೈತರು ತಾವು ಬೆಳೆದ ಹಣ್ಣು:ತರಕಾರಿಗಳನ್ನು ಪಟ್ಟಣಕ್ಕೆ ಸಾಗಿಸಲು ಅನುಭವಿಸುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೆ?

5) ಇವೆಲ್ಲವನ್ನು ಗಮನಿಸಿ ಖಾಸಗಿ ವಾಹನ ಮಾಲೀಕರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

1) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಂಚರಿಸಲು ಒಟ್ಟು 299 ಮಜಲು ವಾಹನಗಳಿಗೆ ಪರವಾನಿಗೆ ನೀಡಲಾಗಿದೆ.

2) ಹೌದು

3) ಬಂದಿದೆ

4) ಇಲ್ಲ

5) ಪರವಾನಿಗೆ ನಿಬಂಧನೆಯನ್ನು ಉಲ್ಲಂಘಿಸಿ ನಿಗದಿತ ಮಾರ್ಗಗಳಲ್ಲಿ ಸಂಚರಿಸದೇ, ಬೇರೆ ಮಾರ್ಗಗಳಲ್ಲಿ ಸಂಚರಿಸುವಂಥ ಮಜಲು ವಾಹನಗಳನ್ನು ಸತತವಾಗಿ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

ಹಿಡುವಳಿ ದೃಢೀಕರಣ ಪತ್ರವನ್ನು ತಹಶೀಲ್ದಾರರಿಗೆ ವರ್ಗಾವಣೆ ಮಾಡುತ್ತಿರುವದು.

2465(2030)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರಪೇಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಡುವಳಿ ದೃಢೀಕರಣ ಪತ್ರವನ್ನು ಈ ಹಿಂದೆ ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಕೊಡುತ್ತಿದ್ದರು. ಈಗ ತಹಶೀಲ್ದಾರರಿಗೆ ವರ್ಗಾವಣೆ ಮಾಡಲು ಕಾರಣವೇನು?

ಆ) ಅದೇ ರೀತಿ ಎಂ.ಪಿ. ನಕಲನ್ನು ಈ ಹಿಂದೆ ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಕೊಡುತ್ತಿದ್ದರು. ಈಗ ತಹಶೀಲ್ದಾರರಿಗೆ ವರ್ಗಾವಣೆ ಮಾಡಲು ಕಾರಣವೇನು;

ಇ) ಜಾತಿ ದೃಢೀಕರಣ ಪತ್ರ ಮತ್ತು ಆದಾಯ ದೃಢೀಕರಣ ಪತ್ರ ಹೋಬಳಿ ಮಟ್ಟದಲ್ಲಿ ಕೊಡಲು ಏನಾದರು ಕ್ರಮ ಕೈಗೊಳ್ಳಲಾಗುವುದೇ;

ಈ) ಹಾಗಿದ್ದಲ್ಲಿ ಎಂದಿನಿಂದ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಈಗಿರುವ ಪದ್ಧತಿಯಲ್ಲಿ ಯಾವುದೇ ಬದಲಾವಣೆ ಇಲ್ಲ.

ಆ) ಮ್ಯೂಟೇಶನ್ ಸರ್ಟಿಫಿಕೇಟ್‌ಗಳನ್ನು ದೃಢೀಕರಿಸುವ ಅಧಿಕಾರವನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಗೆ ಮರಳಿ ಕೊಡಲಾಗುತ್ತಿದೆ.

ಇ) ಈಗ ಇರುವ ಪದ್ಧತಿಯಲ್ಲಿ ಯಾವುದೇ ಬದಲಾವಣೆ ಇಲ್ಲ.

ಈ) ಉದ್ಭವಿಸುವುದಿಲ್ಲ.

ಸೋಮವಾರಪೇಟೆ ತಾಲ್ಲೂಕಿನ ಐಗೂರಿನ ವಿ.ಎಸ್.ಎಸ್.ಎನ್.ನಲ್ಲಿ ಹಣ ದುರುಪಯೋಗ.

2466(2031)

ಶ್ರೀ ಅಪ್ಪಚ್ಚು ರಂಜನ್.ಎಂ.ಪಿ.(ಸೋಮವಾರ ಪೇಟೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸೋಮವಾರ ಪೇಟೆ ತಾಲ್ಲೂಕಿನ ಐಗೂರಿನ ವಿ.ಎಸ್.ಎಸ್.ಎನ್.ನಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?